**ಓ.ಎಸ್.:405/17**

**ಪಿ. ಡಬ್ಲ್ಯೂ:2**

ದಿನಾಂಕಃ 15-04-2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ . ಡಿ.ಎಸ್.ಬಿ. ವಕೀಲರಿಂದ**

ವಾದಿ ಈ ದಾವೆಯನ್ನು ಅವರ ತವರು ಮನೆ ವಿರುದ್ಧ ಆಸ್ತಿಯಲ್ಲಿ ಪಾಲು ಬೇಕು ಅಂತ ಹಾಕಿರುತ್ತಾಳೆ. ವಾದಿಯ ಅತ್ತೆ ಗಂಗವ್ವ ಮರಣ ಹೊಂದಿರುತ್ತಾಳೆ ಆದರೆ ಎಷ್ಟು ವರ್ಷಗಳ ಹಿಂದೆ ಎಂದು ಗೊತ್ತಿರುವುದಿಲ್ಲ. ಗಂಗವ್ವಳಿಗೆ ದುರ್ಗವ್ವ, ರುಕ್ಮವ್ವ, ಉದ್ದವ್ವ, ಹೊನ್ನವ್ವ, ಫಕೀರವ್ವ 5 ಜನ ಸೋದರಿಯರು ಮತ್ತು ಶಿವಪ್ಪ ಎಂಬ ಒಬ್ಬ ತಮ್ಮ ಇರುತ್ತಾರೆ. ಶಿವಪ್ಪ ಮರಣ ಹೊಂದಿರುತ್ತಾನೆ ಆದರೆ ಎಷ್ಟು ವರ್ಷಗಳ ಹಿಂದೆ ಎಂದು ಗೊತ್ತಿರುವುದಿಲ್ಲ. ರುಕ್ಮವ್ವ ಮರಣ ಹೊಂದಿರುತ್ತಾಳೆ. ಶಿವಪ್ಪನಿಗೆ ರೇಣುಕಾ ಮತ್ತು ಮಹಾದೇವಿ ಎಂಬ ಇಬ್ಬರು ಹೆಂಡತಿಯರಿದ್ದು ಆ ಪೈಕಿ ಮಹಾದೇವಿ ಮರಣ ಹೊಂದಿರುತ್ತಾಳೆ. ಮಹಾದೇವಿಗೆ ರೇಣುಕಾ ಮತ್ತು ನಾಗಪ್ಪ ಇಬ್ಬರು ಮಕ್ಕಳಿದ್ದು ಆ ಪೈಕಿ ನಾಗಪ್ಪ ಮರಣ ಹೊಂದಿರುತ್ತಾಳೆ. ನಾಗಪ್ಪನ ಹೆಂಡತಿ ಸಹ ಮರಣ ಹೊಂದಿರುತ್ತಾಳೆ. ಈ ದಾವೆಯನ್ನು 1 ಜಮೀನು, 2 ಮನೆಗೆ ಸಂಬಂಧಪಟ್ಟಂತೆ ಹಾಕಿದ್ದು ಅವುಗಳ ನಂ. ಗೊತ್ತಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ಮನೆತನಕ್ಕೆ ದಾವಾ ಸ್ವತ್ತುಗಳನ್ನು ಹೊರತು ಪಡಿಸಿ ಬೇರೆ ಆಸ್ತಿಗಳು ಇರುವುದಿಲ್ಲ. ಪ್ರತಿವಾದಿಗಳ ಕುಟುಂಬಕ್ಕೆ ಅರಭಾವಿಯಲ್ಲಿ 15/12 ವಿಸ್ತೀರ್ಣ 1 ಎಕರೆ 12 ಗುಂಟೆ ಇರುತ್ತದೆ ಅಂದರೆ ಗೊತ್ತಿಲ್ಲ. ವಾದಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಪಾಲು ಬರುವುದಿಲ್ಲ ಅಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ

2 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು ಗೋಕಾಕ.

ಸಾಕ್ಷಿಯ ಸಹಿ